## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ. ನಂಃ 656/2016**

**ಸಿ.ಡಬ್ಲ್ಯೂಃ 05 ಪಿಡಬ್ಲ್ಯೂಃ08**

ಸಾಕ್ಷಿದಾರರ ಹೆಸರುಃ ಮಾಲತೇಶ ತಂದೆಃ ನಾರಯಣಪ್ಪ
ವಯಸ್ಸುಃ 44 ವರ್ಷ
ಉದ್ಯೋಗಃ ವ್ಯಾಪರ
ಸಾಕೀನಃ ಹಡಗಲಿ.

ದಿಃ **10-06-2025** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ

**01.** ಆರೋಪಿತರ ಪರಿಚಯ ನನಗೆ ಇರುವುದಿಲ್ಲ ಹಾಗೂ ಅವರನ್ನು ನಾನು ನೋಡಿರುವುದಿಲ್ಲ.

**02.** ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಈ ಪ್ರಕರಣಕ್ಕೆ ಸಂಬಂದಿಸಿದಂತೆ ನಾನು ಯಾರ ಮುಂದೆಯು ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಆಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ.ಸ.ಅ ರವರಿಂದ ;

**03.** ದಿನಾಂಕ ಃ**07.01.2016** ರಂದು ನನ್ನ ಗೆಳಯನಿಗಾಗಿ ಮನೆಯ ಬಾಡಿಗೆ ಬೇಕಾಗಿರುವುದರಿಂದ ಮನೆಯನ್ನು ಕೆಳಲೆಂದು ವಿದ್ಯಾಂಜಲಿ ಶಾಲೆಯ ಹತ್ತಿರವಿರುವ ಶ್ರೀ ಬಸವ ಪ್ರಭು ನಗರಕ್ಕೆ ಹೋಗಿ ಬಾಡಿಗೆಗೆ ಮನೆಯನ್ನು ವಿಚಾರಿಸಿತ್ತಿರುವಾಗ ಮನೆ ನಂ. **198/**ಎ ಮನೆಯಲ್ಲಿ ಮಧ್ಯಹ್ನ **2.00** ಗಂಟೆಯ ಸುಮಾರಿಗೆ ಹೋಗಿದ್ದಾಗ ಒಬ್ಬ ವ್ಯಕ್ತಿ ಗಾಬರಿಯಿಂದ ಹೊರಗಡೆ ಬಂದು ಹಡಗಲಿ ಹೊಳಗುಂದಿ ರಸ್ತೆಯ ಕಡೆಗೆ ಓಡಿ ಹೋಗಿರುತ್ತಾನೆ. ಆತನ ವಯಸ್ಸು ಅಂದಾಜು **20** ರಿಂದ **25** ಅಗಿರಬಹುದು.

**04.** ನಾನು ಸಂಜೆ **6.00** ಸುಮಾರಿಗೆ ಮತ್ತೆ ಮನೆಯ ಬಾಡಿಗೆಗಾಗಿ ಹುಡುಕುತ್ತಾ ಹೋಗಿದ್ದಾಗ ಸದರಿ ಮನೆಯ ಬಳಿ ತುಂಬಾ ಜನರು ಸೇರಿದ್ದರು ಅವರನ್ನು ವಿಚಾರಿಸಿದಾಗ ಅದೇ ದಿನ ಬೆಳಗ್ಗೆ **10.00** ರಿಂದ ಸಂಜೆ **5.30** ರ ಮದ್ಯದ

ಅವಧಿಯಲ್ಲಿ ಯಾರೋ ಕಳ್ಳರು ಮನೆಯ ಮುಂಬಾಗಿಲಿಗೆ ಹಾಕಿದ್ದ ಬೀಗವನ್ನು ಮುರಿದು ಮನೆಯ ಒಳಗಿನ ಗಾಡರೇಜ್ ಬೀರುವಿನ ಇಂಟರ್ ಲಾಕರನ ಡೋರ್ ನು ಮೀಟಿ ಮುರಿದು ಅದರಲ್ಲಿ ಇದ್ದ **2.3/4** ಮತ್ತು **10** ಸಾವಿರ ನಗದು ಹಣವನ್ನು ಕಳ್ಳತನ ಮಾಡಿ ಹೋಗಿರುತ್ತಾರೆಂದು ತಿಳಿಸಿರುತ್ತಾರೆ. ನಾನು ಮಧ್ಯಾಹ್ನ ಸದರಿ ಮನೆಯ ಬಳಿ ಬಂದಾಗ ನನ್ನನ್ನು ನೋಡಿ ಓಡಿ ಹೊದಂತಹ ವ್ಯಕ್ತಿಯೇ ಆ ಕಳ್ಳತನವನ್ನು ಮಾಡಿರಬಹುದು ಎಂದು ನಾನು ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯ ಒಪ್ಪಲು ನಿರಕರಿಸಿದ ಹೇಳಿಕೆಯನ್ನು ನಿಪಿ.**07** ಎಂದು ಗುರುತಿಸಲಾಗಿದೆ.

ಪಾಟೀ ಸವಾಲು ಆರೋಪಿ ಪರ ವಕೀಲರ ಪಾಟೀ ಸವಾಲು ಇರುವುದಿಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

" ನನ್ನ ಸಮಕ್ಷಮ "

Sd/-

( ಶ್ರೀಮತಿ ಅಕ್ಷತಾ ಟಿ )
ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ. ನ್ಯಾಯಿಕ ದಂಡಾಧಿಕಾರಿಗಳು., ಹಡಗಲಿ.